ಶ್ರೀ ಬಿ. ಇ. ರಾಮಯ್ಯ.—ಸ್ವಾಮಿ ಪ್ರತಿ ವರ್ಷವು ಎಕ್ಸಿಕ್ಯೂಟೀವ್ ಇಂಜಿನಿಯರ್, ಹಾಗೂ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಕಡೆ ರಿಪೋರ್ಟ್ ಇದೆ ಎಂದು ಹೇಳುತ್ತೀರಿ, ಆದ್ದರಿಂದ ತಾವು ಈ ಕೆಲಸಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ, ಮತ್ತು ಯಾವಾಗ ಕಂಪ್ಲೀಟ್ ಮಾಡುತ್ತೀರಿ ಎನ್ನುವ ಬಗ್ಗೆ ಒಂದು ಖಚಿತವಾದ ತಾರೀಖು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್. ಬಿ. ನಗರಾಳ್.—ಇದರ ಬಗ್ಗೆ ಖಚಿತವಾದ ತಾರೀಖು ಹೇಳುವುದಕ್ಕೆ ಆಗುವುದಿಲ್ಲ, ಆದಷ್ಟು ಬೇಗ ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ —ಸ್ವಾಮಿ, ಈ ವರ್ಷ ಅಂದರೆ ೧೯೭೫-೭೬ ರಲ್ಲಿ ಯಾತ ನೀರಾವರಿ ಬಗ್ಗೆ ಎಷ್ಟು ಕೆಲಸ ತೆಗೆದುಕೊಳ್ಳುತ್ತೀರಾ ಎಂದು ಹೇಳುತ್ತಿರಾ?

ಶ್ರೀ ಎಸ್ ಬಿ. ನಗರಾಳ್.—೧೯೭೫-೭೬ ರಲ್ಲಿ ಎಷ್ಟು ಕೆಲಸಗಳು ಸ್ಕ್ರೂಟಿನಿಯಾಗಿ ಬರುತ್ತವೆ ಎನ್ನುವುದನ್ನು ನೋಡಿಕೊಂಡು ಮತ್ತು ದುಡ್ಡಿನ ಪರಿಸ್ಥಿತಿಯನ್ನು ನೋಡಿಕೊಂಡು ಎಷ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Vasectomy and Tubecttomy Operations

508. SRI K. H. HANUME GOWDA (Hassan) —

Will the Minister for Health be pleased to state:—

(*a*) the number of Vasectomy and Tubectomy Operations conducted on men and women respectively during the last three years (yearwise details may be furnished);

(*b*) the amount Government is spending on each Tubectomy and Vasectomy Operations :

(*c*) the number of complaints received every year regarding the the failure of these operations ;

(*d*) the reasons for such failures ;

(*e*) the names of Hospitals and the number of women who expired within ten days after the Tubectomy Operation reported to Government ;

(*f*) whether the Government has granted compensation to the bereaved family due to death on account of this operation;

(*g*) the number of representations requesting compensation in respect of death cases: if so, the stage at which they stand:

(*h*) whether the responsibility for the death of the party due to improper Tubectomy Operations is fixed on the Doctor who performs the operations; if so, to what extent ?

SRI H. SIDDAVEERAPPA (Minister for Health).—

(*a*) The number of Vasectomy and Tubectomy Operations conducted during the last three years is as follows —

	1971-72	1972-73	1973-74
Vasectomy ...	11,980	87,936	11,454
Tubectomy ...	44,798	53,314	48,817
Total ...	56,778	1,51,250	66,271

(*b*) The expenditure incurred for one Tubectomy Operation is Rs. 45 where there is boarding arrangment and Rs. 70 where there is no such arrangment and Rs. 35 for Vasectomy Operations.

(*c*) The number of complaints received for the failure of this operation is as follows.—

Year		Number of Complaints
1972	...	2
1973	...	7
1974	...	7

(*d*) the reasons for failure are as follows:

(1) Recanlization

(2) Presence of many vasa

(3) Non-observance of medical advice during post operation period.

(*e*) Government have Received 22 reports of death of women within ten days after Tubectomy Operations during the last three years.

The name of the Hospital and the details of the dead persons are as follows :—

1.	Combined Hospital, Tyamagondlu	...	1
2.	Primary Health Centre, Gathaborala	...	1
3.	K. H. D. Hospital, Ghataprabha	...	1
4.	Civil Hospital Belgaum		1
5.	Government Hospital, Madavapura	...	1
6.	Silver Jubilee Maternity Hospital, Bijapur	...	1
7.	Hiryur Hospital Camp	...	2
8.	Primary Health Centre, Anaji	...	1
9.	do Holalkere	...	1
10.	Maternity Hospital, Chickmangalore	...	1
11.	Comprehensive F.P.W. Centre, Dharwar	...	1
12.	District Hospital, Dharwar	...	1
13.	Local Fund Hospital, Shanthigrama	...	2
14.	P.H.C. Battlahalli	...	1
15.	Maternity Hospital, K.G.F.	...	1
16.	General Hospital, Mandya	...	1
17.	P.H.C. Konandur	...	1
18.	do Amrathur	...	1
19.	do Sira	...	1
20.	do Chickanyakanahalli	...	1
			22

(*f*) Not yet. The Government will consider the grant of compensation.

(*g*) Representation have been received in respect of 20 cases for compensation and they are under consideration of the Government.

(*h*) The suitable action will be taken after conducting a detailed enquiry in death cases.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಆಪರೇಷನ್ ಆದ ೧೦ ದಿವಸದಲ್ಲಿ ಸುಮಾರು ೨೨ ಜನ ಹೆಂಗಸರು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದೀರಿ. ೧೦ ದಿವಸದ ಮೇಲೆ ನಾನಾ ರೀತಿಯಲ್ಲಿ ಸತ್ತಿರುವವರು ಬಹಳ ಜಾಸ್ತಿ ಜನ ಇದ್ದಾರೆ. ತಾವು ತಮ್ಮ ಇಳಿವಯಸ್ಸಿನಲ್ಲಿ ಇದನ್ನು ಕೇಳಬೇಕಾಗಿ ಬಂದಿದೆ

† ಶ್ರೀ ಹೆಚ್. ಸಿದ್ದವೀರಪ್ಪ.—ನನ್ನ ವಯಸ್ಸು ನನ್ನ ಕೈಯಲ್ಲಿ ಇಲ್ಲ. ಇಷ್ಟು ವಯಸ್ಸಿನವರೇ ಹೆಲ್ತ್ ಮಿನಿಷ್ಟರ್ ಆಗಬೇಕು ಎಂದೂ ಇದ್ದರೆ ಆಗಬಹುದು.

ಶ್ರೀ ಕೆ. ಹೆಚ್. ಹನುಮೇ ಗೌಡ.—ಈಗ ನನ್ನ ಮತ್ತು ಜನಗಳ ದೂರು ಏನು ಎಂದರೆ, ಹೆಂಗಸರಿಗೆ ಆಪರೇಷನ್ ಮಾಡಿದ ಮೇಲೆ, ಪುನಃ ಅವರ ಆರೋಗ್ಯದ ಬಗ್ಗೆ ವಿಚಾರಿಸಲು ತಿರುಗಿ ನೋಡುವುದೇ ಇಲ್ಲ ಎನ್ನುವುದು. ತಾವು ಒಂದು ಟಾರ್ಗೆಟ್ ಫಿಕ್ಸ್ ಮಾಡಿ, ಇಂತಿಂಥವರಿಗೆ ಇಂತಿಂಥ ಡಾಕ್ಟರ್ ಎಂದು ಹಂಚಿಕೆ ಮಾಡಿರುವುದರಿಂದ ಇಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ. ಕೆಲವು ಸಂದರ್ಭಗಳಲ್ಲಿ ಆಪರೇಷನ್ ಆದಮೇಲೆ ಆಕೆಯನ್ನು ವಿಚಾರಿಸದೆ, ಎಷ್ಟೋ ಜನ ಗಂಡಂದಿರು, ತಮ್ಮ ಹೆಂಡತಿಯರನ್ನು ಕಳೆದುಕೊಂಡಿದ್ದಾರೆ. ಅವರ ಮಕ್ಕಳುಗಳು ಬೀದಿ ಬಿಕಾರಿಗಳಾಗಿದ್ದಾರೆ ಆದುದರಿಂದ, ಮಾನ್ಯ ಮಂತ್ರಿಗಳು ಒಂದು ಜವಾಬ್ದಾರಿಯನ್ನು ಗೊತ್ತು ಮಾಡಿ, ಆಪರೇಷನ್ ಆದಮೇಲೂ ಕೂಡ ಹೆಂಗಸರ ಬಗ್ಗೆ ಆಗಿಂದಾಗ್ಗೆ ವಿಚಾರಿಸುವ ಹಾಗೆ ಮಾಡಬೇಕು. ಹಾಗೆ ವಿಚಾರಿಸದೇ ಇರುವಂಥ ಡಾಕ್ಟರುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸೂಚನೆ ಕೊಡಿ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳುವ ರೀತಿ ಹೇಗಿದಯೆಂದರೆ, ಆಪರೇಷನ್ ಆದಂಥ ಹೆಂಗಸರು ಸತ್ತುಹೋದರೂ ವಿಚಾರಣೆ ಮಾಡುವುದಿಲ್ಲ; ಅವರ ವಿಚಾರದಲ್ಲಿ ಯಾರು ಏನನ್ನೂ ಕೇಳುವುದಿಲ್ಲ ಎನ್ನುವ ರೀತಿ ಇದೆ. ಆದರೆ, ಇದು ಸತ್ಯಕ್ಕೆ ದೂರವಾದ ಮಾತು, ನಾನು ೧–೨–೩ ಆಸ್ಪತ್ರೆಗಳಿಗೆ ಹೋಗಿ ಪರ್ಸನಲ್ ಇನ್‌ಕ್ವೈರಿ ಮಾಡಿದ್ದೇನೆ. ಒಂದೊಂದು ಸಮಯದಲ್ಲಿ ಡಾಕ್ಟರುಗಳು ಸರಿಯಾಗಿ ಆಪರೇಷನ್ ಮಾಡಿದೇ ಕೆಲವರಿಗೆ ತೊಂದರೆಯಾಗಿರಬಹುದು; ಕೆಲವು ಸಂದರ್ಭಗಳಲ್ಲಿ ಡಾಕ್ಟರುಗಳ ಅಚಾತುರ್ಯದಿಂದ ಅಥವಾ ಬೇರೆ ಕಾರಣಗಳಿಂದ ಆಗಿರಬಹುದು. They give some reasons which are of biological nature. ಈ ರೀತಿ ಆಗಬಾರದು, ನಾನೇನು ಈ ರೀತಿ ಆಗಬೇಕೆಂದು ಹೇಳುವುದಿಲ್ಲ ಏತಕ್ಕೆ ಆಗಿದೆ ಏನಾಗಿದೆ ಎಂಬುದನ್ನು ಪ್ರತಿಯೊಂದು ಕೇಸ್‌ನಲ್ಲೂ ಎನ್‌ಕ್ವೈರಿ ಮಾಡಿದ್ದಾರೆ. ಹಾಗಿದ್ದು ಈ ರೀತಿ ಆಗಿರುವುದು ದುರಾದೃಷ್ಟ.

ಶ್ರೀ ಕೆ ಹೆಚ್. ಹನುಮೇಗೌಡ.—ಮಾನ್ಯ ಮಂತ್ರಿಗಳು ೨೨ ಕೇಸ್‌ಗಳಲ್ಲಿ ಎನ್‌ಕ್ವೈರಿ ಮಾಡಿದ್ದಾರೆ ಎಂದು ಹೇಳಿದರು. ಈ ೨೨ ಕೇಸುಗಳಲ್ಲಿ ಎಷ್ಟು ಕೇಸುಗಳು ಡಾಕ್ಟರುಗಳ ಅಚಾತುರ್ಯದಿಂದಾಗಿ ಸಾವು ಸಂಭವಿಸಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಡಾಕ್ಟರುಗಳೂ ಕೂಡ ಡಾಕ್ಟರುಗಳ ಅಚಾತುರ್ಯದಿಂದ ಆಗಿದೆ ಎಂದು ರಿಪೋರ್ಟ್ ಕೊಡುವುದಿಲ್ಲ. ಕೆಲವು ಆಪರೇಷನ್ಸ್‌ಗಳನ್ನು ಮಾಡುತ್ತಾರೆ. ಆಪರೇಷನ್ ಮಾಡುವಾಗ ಕೇಸ್‌ಗಳನ್ನು ಕೊಲ್ಲಬೇಕೆಂದು ಎಂದು ಯಾರೂ ಮಾಡುವುದಿಲ್ಲ. ಯಾವುದೋ ಒಂದು ಕಾರಣದಿಂದ ಪ್ರಾಣ ಹೋಗುತ್ತದೆ. ಡಾಕ್ಟರೇನು ದೇವತೆಗಳಲ್ಲ, ನಾನು ನೋಡಿದ ಹಾಗೆ ಒಂದು ಕ್ಯಾಂಪಿನಲ್ಲಿ ೩–೪ ಸಾವಿರ ಜನರಿಗೆ ಆಪರೇಷನ್‌ಮಾಡಿದ್ದರು. ಆದರಲ್ಲಿ there was not even one case of death. ಈಗ ಹೊಸದಾಗಿ ಬಂದಂಥ ಡಾಕ್ಟರುಗಳು ಎಷ್ಟೊ ಜನರಿಗೆ ಆಪರೇಷನ್ ಮಾಡಬೇಕಾಗುತ್ತದೆ. ಅಂಥಾ ಸಮಯದಲ್ಲಿ ಡಾಕ್ಟರುಗಳ ನೆಗ್ಲಿಜೆನ್ಸ್ ಆಗಿರಬಹುದು; ನಾನು ಇಲ್ಲ ಎಂದೂ ಹೇಳುವುದಿಲ್ಲ. ಅಂಥಾ ಕೇಸ್‌ಗಳೇನಾದರೂ ಬಂದರೆ, ನಾವು ಅವರಿಗೆ ಅಡಿಕ್ವೇಟ್ ಕಾಂಪೆನ್‌ಷೇಷನ್ ಕೊಡುತ್ತೇವೆ,

ಶ್ರೀ ಕೆ. ಹೆಚ್. ಹನುಮೆಗೌಡ.—ಇನ್ನು ಮುಂದೆ ಈ ರೀತಿಯಾದಂಥ ಅಚಾತುರ್ಯಗಳು ಆಗದ ಹಾಗೆ ಮತ್ತು ಆಪರೇಷನ್ಸ್ ಆದವರು ಹೆಚ್ಚು ಕಾಲ ಆರೋಗ್ಯವಂತರಾಗಿ ಬಾಳುವ ಹಾಗೆ ಏನಾದರೂ ಮಾಡುತ್ತೀರಾ?

ಶ್ರೀ ಎಚ್ ಸಿದ್ದವೀರಪ್ಪ —ಆಪರೇಷನ್ ಆದಮೇಲೆ ಇಷ್ಟು ದಿನಗಳವರೆಗೆ ನ್ಯೂಟ್ರಿಷನ್ ಫುಡ್ ತೆಗೆದುಕೊಳ್ಳಬೇಕೆಂದು ಹೇಳಿ ಅದರ ಖರ್ಚಿಗೆ ದುಡ್ಡನ್ನೂ ಕೂಡ ಕೊಡುವ ವ್ಯವಸ್ಥೆ ಮಾಡಿದ್ದೇವೆ,

ಶ್ರೀ ಕೆ. ಯಂಕಟಪ್ಪ —ಆಪರೇಷನ್ಸ್ ಆದಂಥವರಿಗೆ ಆ ಹಣವನ್ನು ಕೊಡದೆ, ಡಾಕ್ಟರುಗಳೇ ಉಪಯೋಗ ಮಾಡಿಕೊಳ್ಳುತ್ತಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.— ಅದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ನನಗೆ ಗೊತ್ತಿಲ್ಲ. ಆಪರೇಷನ್ ಆದಂಥವರಿಗೆ ಈ ದುಡ್ಡನ್ನು ಕೊಡಬೇಕೆಂದು ಇದೆ. ಒಂದು ವೇಳೆ ಆದನ್ನು ಡಾಕ್ಟರುಗಳೇ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ತಾವು ಪರ್ಸನಲ್ ಆಗಿ ಸರಕಾರದ ಗಮನಕ್ಕೆ ತಂದರೆ, ಆದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್ —ಈಗ ಮಾನ್ಯ ಮಂತ್ರಿಗಳು ಕೆಲವು ಸಂದರ್ಭಗಳಲ್ಲಿ ಕಾಂಪೆನ್‌ಸೇಷನ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ರೀತಿ ಕಾಂಪೆನ್‌ಸೇಷನನ್ನು ಆಕಸ್ಮಾತ್ ಆಗಿ ಸಾವು ಸಂಭವಿಸಿದ ಸಂದರ್ಭದಲ್ಲಿ ಕೊಟ್ಟಿದ್ದಾರೊ? ಹಾಗೆ ಕೊಟ್ಟಿದ್ದರೆ, ಎಷ್ಟು ಕೇಸುಗಳಿಗೆ ಕೊಟ್ಟಿದ್ದಾರೆ? ಮತ್ತು ಯಾವ ಯಾವ ರೇಟಿನಲ್ಲಿ ಕಾಂಪನ್‌ನೇಷನ್ ಕೊಟ್ಟಿದ್ದೀರಿ ಎಂಬ ಮಾಹಿತಿಯನ್ನು ಮಾನ್ಯ ಮಂತ್ರಿಗಳು ದಯಮಾಡಿ ತಿಳಿಸಬೇಕು.

ಶ್ರೀ ಎಚ್. ಸಿದ್ದವೀರಪ.—ಕಾಂಪೆನ್‌ಸೇಷನ್ ಕೊಡಬೇಕಾಗುವಂಥ ಕೇಸಂಗಳ ಬಗ್ಗೆ ಎನ್‌ಕ್ವೈರಿ ಮಾಡಿ ನನಗೆ ರಿಪೋರ್ಟ್ ಕಳುಹಿಸಬೇಕೆಂದು ಸಂಬಂಧಪಟ್ಟವರಿಗೆ ಹೇಳಿದ್ದೇನೆ. ಡಾಕ್ಟರುಗಳು ಏನಾದರೂ ನೆಗ್ಲಿಜೆನ್‌ನಿಂದ ಕೆಲಸ ಮಾಡಿದರೆ our programme will be a failure unless we create confidence in the minds of the people. They have to taken all possible care for that. ಇವತ್ತಿನವರೆಗೂ ನಾವು ಕಾಂಪನೇಷನ್ ಕೊಟ್ಟಿಲ್ಲ; ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಗಟ್ಟಿ ಚಂದ್ರಶೇಖರ್.—ಈ ಪ್ರಶ್ನೋತ್ತರ ಪಟ್ಟಿ ತಮ್ಮ ಸೆಕ್ರೆಟರಿಯೇಟ್‌ನಲ್ಲಿ ಪ್ರಿಂಟ್ ಆಗಿದೆ. ಆದರೆ, ಇಲ್ಲಿ ಕನ್ನಡ ಮತ್ತು ಇಂಗ್ಲೀಷ್ ಪದಗಳ ಅರ್ಥಗಳಲ್ಲಿ ಸಾಮ್ಯವಿಲ್ಲದೆ ತದಿರುದ್ದವಾಗಿದೆ. ಕನ್ನಡದಲ್ಲಿ ''ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಯಾವ ವರ್ಷದಲ್ಲಿ ಗಂಡಸರಿಗೆ ಮತ್ತು ಹೆಂಗಸರಿಗೆ ವ್ಯಾಸಕ್ಟಮಿ ಮತ್ತು ಟ್ಯುಬಕ್ಟಮಿ ಆಪರೇಷನ್ಸ್‌ಗಳು ನಡೆದಿವೆ. ಎಂದು ಇದೆ. ಆದರೆ, ಇಂಗ್ಲಿಷ್‌ನಲ್ಲಿ 'the number of Vasectomy and Tubectomy Operations' conducted on men and women respectively during the last three years'' ಎಂದು ಇದೆ. ಹಾಗಾದರೆ, ಗಂಡಸರಿಗೆ ಟ್ಯೂಬಕ್ಟಮಿ, ಹೆಂಗಸರಿಗೆ ವ್ಯಾಸಕ್ಟಮಿ ಮಾಡುವುದು ಉಂಟಿ?

ಶ್ರೀ ಸಿದ್ದವೀರಪ್ಪ —ಮಾನ್ಯ ಸದಸ್ಯರು ತಪ್ಪು ಅರ್ಥ ಮಾಡಿಕೊಂಡಿದ್ದಾರೆ. ವ್ಯಾಸಕ್ಟಮಿ ಮಾಡುವುದು ಗಂಡಸರಿಗೆ ಮತ್ತು ಟ್ಯೂಬಕ್ಟಮಿ ಮಾಡುವುದು ಹೆಂಗಸರಿಗೆ ಎಂದು ತಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು.

ಶ್ರೀ ಗಟ್ಟಿ ಚಂದ್ರಶೇಖರ್ —೧೯೭೨-೭೩ರಲ್ಲಿ ವ್ಯಾಸಕ್ಟಮಿ ಮಾಡಿದವರ ಸಂಖ್ಯೆ ೮೭,೯೩೬ ಎಂದು ಇದೆ. ಆದರೆ, ೧೯೭೪ರಲ್ಲಿ ಆ ಸಂಖ್ಯೆ ೧೧,೪೫೪ಕ್ಕೆ ಇಳಿದಿದೆ. ಹೀಗೆ ಕಡಿಮೆಯಾಗಲು, ವ್ಯಾಸಕ್ಟಮಿ ಮಾಡಿಕೊಳ್ಳುವ ಗಂಡಸರು ಕಡಿಮೆಯಾಗಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—೧೯೭೨-೭೩ನೇ ವರ್ಷದಲ್ಲಿ ಒಂದು ಮಾಸ್ ಕ್ಯಾಂಪ್ ಮಾಡಿದ್ದರು. ಒಂದೊಂದು ಜಿಲ್ಲೆಯಲ್ಲಿ, ಒಂದು ಮುಖ್ಯ ಭಾಗದಲ್ಲಿ ಎಲ್ಲರನ್ನೂ ಕರೆಸಿ, ಮಾಸ್ ಕ್ಯಾಂಪ್ ಮಾಡಿ, ಆಪರೇಷನ್ ಮಾಡಿದ್ದರಿಂದ ಜಾಸ್ತಿ ಸಂಖ್ಯೆ ಇದೆ. ಆದರೆ, ಕೇಂದ್ರ ಸರಕಾರದವರು ಮುಂದಿನ ವರ್ಷದಿಂದ ಈ ಮಾಸ್ ಕ್ಯಾಂಪ್ಸ್ ಮಾಡುವುದನ್ನು ಕಡಿಮೆ ಮಾಡಿ, ಮೊದಲು ಯಾವ ರೀತಿ ವ್ಯವಸ್ಥೆ ಇತ್ತೊ ಆ ರೀತಿ ಮಾಡಿ ಎಂದು ಸೂಚನೆ ಕೊಟ್ಟರು. ಆದುದರಿಂದ, ೧೯೭೪ರಲ್ಲಿ ಸಂಖ್ಯೆ ಕಡಿಮೆಯಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಕಾಂಪೆನ್‌ಸೇಷನ್ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ತಾವು ಕಾಂಪೆನ್‌ಸೇಷನ್ ಎಷ್ಟು ಕೊಡುತ್ತೀರಿ? ೨–೩ ವರ್ಷಗಳಿಂದಲೂ ತಮ್ಮ ಆಫೀಸಿನಲ್ಲಿ ಈ ಬಗ್ಗೆ ಬಂದ ಮನವಿಗಳು ಇನ್ನೂ ಇತ್ಯರ್ಥವಾಗದೇ ಕುಳಿತಿವೆ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇಷ್ಟೇ ಕೊಡುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಇವತ್ತು ನಮ್ಮ ಜಾಯಿಂಟ್ ಡೈರೆಕ್ಟರ್‌ರವರಿಗೆ ಇದರ ಬಗ್ಗೆ ಒಂದು ವಾರದಲ್ಲಿ ರಿಪೋರ್ಟ್ ಕೊಡುವಂತೆ ಹೇಳಿದ್ದೇನೆ. What we must give is should not notional or nominal compensation, but adequate and fair compensation.

Works Taken up under Minimum Needs Programme

512. SRI PRABHAKAR TELKAR (Kalagi).—

will the Chief Minister be plaesed to state.—

(*a*) whether the Minimum Needs programme initiated by the Central Government has been taken up in the State;

(*b*) if so, the particulars of the works taken up on and the estimated costs thereon;

(*c*) the works taken up under Minimum Needs Programme in Gulbarga District for 1973-74 and 1974-75 (All the particulars of works and its costs be given);

(*d*) whether any time limit has been prescribed for completion of these works in the villages which require Minimum Needs (kindly furnish the list of villages in Gulbarga District which come under this Programme)?

SRI S. M. KRISHNA.–(Minister for Industries and Parliamentary affairs [on behalf of SRI D. DEVARAJ URS.—Chief Minister]

(*a*) Yes.

(*b*) The works to be taken up are as per list appended. Estimated costs are not readily available. By broad Programmes to be implemented, the tentative Fifth Plan outlays are:

		(Rs. Lakhs)
1.	Elementary Education ...	1,721
2.	Primary Health Centres ...	1,248
3,	Rural Water Supply ...	3,400
4.	Rural Roads ...	1,000
5	Rural Education ...	191
6.	House Sites to Land lss Labourers ...	750
7.	Slum Improvement ...	450
8,	Nutrition ...	2,900
	Totaf	11,660